# ನಾವೆಷ್ಟು ನಾಗರಿಕರು?

ನಮ್ಮೆಲ್ಲರಿಗೂ ಪರಿಚಿತವಾಗಿರುವ 'ನಾಗರಿಕತೆ' ಎಂಬ ಪದವನ್ನು ಸೂತ್ರರೂಪದಲ್ಲಿ ವಿವರಿಸುವುದು ಕಷ್ಟ. 'ನಗರದಲ್ಲಿ ವಾಸಿಸುವವರ ನಡೆವಳಿಕೆಯೇ ನಾಗರಿಕತೆ' ಎಂಬರ್ಥದಲ್ಲಿ ಈ ಪದ ಹುಟ್ಟಿಕೊಂಡಿರಬೇಕು. ಒಂಟಿಯಾಗಿಯೇ, ಸೀಮಿತ ಪರಿವಾರದೊಂದಿಗೇ ತನ್ನಷ್ಟಕ್ಕೆ ತಾನೇ ಬದುಕುತ್ತಿದ್ದ ಪ್ರಾಚೀನ ಮಾನವನಿಗೆ ನಾಗರಿಕತೆಯ ಕಲ್ಪನೆ ಇರಲಿಲ್ಲ. ಆತ ಇತರರ ಬಗ್ಗೆ ಯೋಚಿಸುತ್ತಿರಲಿಲ್ಲ. ತಾನು ಮತ್ತು ತನ್ನ ಪರಿವಾರ ಮಾತ್ರ ಬದುಕಿದರೆ ಸಾಕು ಎಂಬ ಧೋರಣೆಯಿಂದ ತನ್ನ ಜೀವನ ಕ್ರಮವನ್ನು ರೂಪಿಸಿಕೊಂಡಿದ್ದ. ಆದರೆ ಕಾಲಕ್ರಮೇಣ ಆತನಿಗೆ ಸಮುದಾಯದಲ್ಲಿ ಬದುಕಬೇಕಾದ ಅಗತ್ಯ ಉಂಟಾಯಿತು. ಅದಕ್ಕನುಗುಣವಾಗಿ ಆತನ ಆಲೋಚನಾಕ್ರಮ ಹಾಗೂ ಜೀವನಕ್ರಮಗಳಲ್ಲಿ ಬದಲಾವಣೆ ಕಾಣಿಸಿಕೊಂಡಿತ್ತು. 'ತಾನು ಮಾತ್ರ ಬದುಕಿದರೆ ಸಾಲದು; ಇತರರೂ ಬದುಕಬೇಕು, ಅವರಿಗೆ ತನ್ನಿಂದ ತೊಂದರೆಯಾಗಬಾರದು' ಎಂಬ ತಿಳಿವಳಿಕೆ ಮನುಷ್ಯನಲ್ಲಿ ಮೂಡಿದಾಗಲೇ 'ನಾಗರಿಕತೆ' ಎಂಬ ಪರಿಕಲ್ಪನೆಯ ಉದಯವಾಯಿತೆನ್ನಬಹುದು.

ಸಾಮಾನ್ಯವಾಗಿ ಒಬ್ಬ ಮನುಷ್ಯನನ್ನು ಆತನ ವೇಷಭೂಷಣ, ಮಾತಾಡುವರೀತಿ, ಇತರರೊಂದಿಗೆ ಆತನ ವರ್ತನೆ ಮುಂತಾದವುಗಳನ್ನು ಆಧರಿಸಿ, ಆತ ನಾಗರಿಕನೋ, ಅನಾಗರಿಕನೋ ಎಂಬುದನ್ನು ಗುರುತಿಸುತ್ತೇವೆ. ಅರ್ಥಾತ್ ನಾಗರಿಕತೆ ಎಂಬುದನ್ನು ವ್ಯಕ್ತಿಯೊಬ್ಬನ ಬಾಹ್ಯ ಸ್ವರೂಪ ಹಾಗೂ ವರ್ತನೆಗಳ ಸಹಾಯದಿಂದ ಅಳೆಯುತ್ತೇವೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ 'ಮನುಷ್ಯ ತನ್ನ ಬಾಹ್ಯ ಸನ್ನಿವೇಶಗಳಿಗೆ– ಅಂದರೆ ಸಮಾಜ, ಅವಕಾಶ, ವ್ಯವಹಾರ ಮೊದಲಾದವುಗಳಿಗೆ ತೋರಿಸುವ ಪ್ರತಿಕ್ರಿಯೆಯ ಫಲವೇ ನಾಗರೀಕತೆ.' ನಾಗರಿಕತೆ ಹಾಗೂ ಸಂಸ್ಕೃತಿ ಎಂಬ ಎರಡು ಪರಿಕಲ್ಪನೆಗಳೂ ಪರಸ್ಪರ ತಳಕು ಹಾಕಿಕೊಂಡಿರುವಂಥವು. ಸಂಸ್ಕೃತಿ ಎಂಬುದು ವ್ಯಕ್ತಿಯ ಆತ್ಮವ್ಯವಸಾಯದ ಫಲ ಎನ್ನುತ್ತಾರೆ ತಿಳಿದವರು. ಅದು ವ್ಯಕ್ತಿಯ ಅಂತರಂಗದಲ್ಲಿ ವಿಕಸಿತವಾಗಿ, ಆತನ ಬಹಿರಂಗದಲ್ಲಿ ಹೊಮ್ಮುವಂಥದು. ನಾಗರಿಕತೆ ಬಹಿರ್ಮುಖವಾಗಿದ್ದು ನಿಧಾನವಾಗಿ ಅಂತರಂಗಕ್ಕೆ ಇಳಿಯಬೇಕಾದುದು. ನಮ್ಮ ಮಹತ್ವದ ಚಿಂತಕರಲ್ಲೊಬ್ಬರಾಗಿರುವ ಪ್ರೊ. ಎಲ್.ಎಸ್. ಶೇಷಗಿರಾವ್ ಅವರು ತಮ್ಮದೊಂದು ಲೇಖನದಲ್ಲಿ ಈ ಬಗ್ಗೆ ಸೊಗಸಾಗಿ ವಿಶ್ಲೇಷಿಸಿದ್ದಾರೆ. ಅವರೆನ್ನುತ್ತಾರೆ: 'ಸಮಾಜದ ನಿಯಮ, ಇತರರ ಅಭಿಪ್ರಾಯ, ಯೋಗ್ಯ ಅಯೋಗ್ಯಗಳ ಬಗೆಗೆ ತನ್ನ ಸ್ವಂತ ಪ್ರಜ್ಞೆ, ಯಾವುದಕ್ಕೂ ಲಕ್ಷ್ಯ ಮಾಡದವನು ಅನಾಗರಿಕ, ಅಸಂಸ್ಕೃತ. ಸಮಾಜದ ಕಟ್ಟಳೆಗೆ ವಿರುದ್ಧವಾಗಿ ನಡೆದರೆ ತನಗೆ ಶಿಕ್ಷೆಯಾಗುತ್ತದೆ ಎಂದು ಭಯಪಡುವವನಲ್ಲಿ ನಾಗರಿಕತೆ ಅಂಕುರವಿಟ್ಟಿದೆ. ತನ್ನ ಸುತ್ತಮುತ್ತಲಿರುವವರು ತನಗೆ ಶಿಕ್ಷೆ ಕೊಡಲಾರರು, ಆದರೂ ಅವರ ಅಭಿಪ್ರಾಯಕ್ಕೆ ತಾನೂ ಮನ್ನಣೆ ಕೊಡಬೇಕು ಎಂಬ ಅರಿವಿರುವವನು ನಾಗರಿಕತೆಯನ್ನು ಇನ್ನೂ ಹೆಚ್ಚಾಗಿ ಬೆಳೆಸಿಕೊಂಡಿದ್ದಾನೆ, ಸಂಸ್ಕೃತಿಯತ್ತ ಸಾಗಿದ್ದಾನೆ. ಇದು ಮನುಷ್ಯನಿಗೆ ಸಲ್ಲುವ ನಡತೆ, ಇದು ಮನುಷ್ಯನಿಗೆ ಸಲ್ಲದ ನಡತೆ ಎಂಬ ಪ್ರಜ್ಞೆಯ ಬೆಳಕನಲ್ಲಿ ನಡೆಯುವವನು ಸುಸಂಸ್ಕೃತ.'

ಇದನ್ನು ಹಿನ್ನೆಲೆಯಾಗಿರಿಸಿಕೊಂಡು ನಮ್ಮ ದೇಶದ ಪ್ರಸ್ತುತ ವಿದ್ಯಮಾನಗಳನ್ನು ಗಮನಿಸಿದಾಗ 'ನಾವೆಷ್ಟು ನಾಗರಿಕರು?' ಎಂಬ ಪ್ರಶ್ನೆಗಿಂತ 'ನಾವು ನಾಗರಿಕರೆ?' ಅಥವಾ 'ನಾವು ನಿಜಕ್ಕೂ ಮನುಷ್ಯರೆ?' ಎಂಬ ಪ್ರಶ್ನೆಗಳೇ ಸೂಕ್ತವಾದೀತು, ನೈಸರ್ಗಿಕ ಶಕ್ತಿಗಳನ್ನು ವಶಪಡಿಸಿಕೊಂಡು, ಆಧುನಿಕ ಆವಿಷ್ಕಾರಗಳನ್ನು ಬಳಸಿಕೊಂಡು ಬದುಕುತ್ತಿರುವ ನಾವು ನಾಗರಿಕರಾಗಿ, ಮನುಷ್ಯರಾಗಿ ಬದುಕುವುದರಲ್ಲಿ ಸೋಲುತ್ತಿದ್ದೇವೆ. ನಮ್ಮ ಹಿರಿಯರಲ್ಲಿ ಪ್ರಖರವಾಗಿದ್ದ ಮೌಲ್ಯಪ್ರಜ್ಞೆ, ನಮ್ಮಲ್ಲಿ ಸಂಪೂರ್ಣ ಮಂಕಾಗಿದೆ. ಅಂತರಂಗ ಮತ್ತು ಬಹಿರಂಗ ಎರಡನ್ನೂ ನಿರ್ಮಲವಾಗಿ ಇರಿಸಿಕೊಳ್ಳಬೇಕೆಂಬ ವಿವೇಕ ನಮ್ಮಲ್ಲಿಲ್ಲ. ಹೆಣ್ಣುಮಕ್ಕಳನ್ನು ಪೀಡಿಸಿ, ತಮ್ಮ ತೆವಲು ತೀರಿಸಿಕೊಳ್ಳುವ ಪೈಶಾಚಿಕ ಪ್ರವೃತ್ತಿ ಎಷ್ಟು ಹೆಚ್ಚಿದೆ ಎಂಬುದನ್ನು ದಿನನಿತ್ಯ ಮಾಧ್ಯಮಗಳಲ್ಲಿ ನೋಡುತ್ತಲೇ ಇದ್ದೇವೆ. ನಮ್ಮ ಪರಿಸರವನ್ನು ಸ್ವಚ್ಛವಾಗಿರಿಸಿಕೊಂಡು, ವಾಸಯೋಗ್ಯವಾಗಿ ಕಾಪಾಡಿಕೊಳ್ಳಬೇಕೆಂಬ ಎಚ್ಚರ ನಮ್ಮಿಂದ ಸಂಪೂರ್ಣ ಮರೆಯಾಗಿದೆ. ಉದ್ದೇಶಪೂರ್ವಕವಾಗಿ ಕಾನೂನು ಕಟ್ಟಳೆಗಳನ್ನು ಉಲ್ಲಂಘಿಸಿ, ಸಮುದಾಯದ ಸ್ವಾಸ್ಥ್ಯವನ್ನು ಹಾಳುಮಾಡುವ ಪ್ರವೃತ್ತಿ ವಿಜೃಂಭಿಸುತ್ತಿದೆ. ಅಧಿಕಾರ ಗಿಟ್ಟಿಸಿಕೊಂಡು, ಸಿಕ್ಕ ಅವಕಾಶದಲ್ಲಿ ಸಾಧ್ಯವಾದಷ್ಟು ಕೊಳ್ಳೆ ಹೊಡೆದು, ಹಲವು ತಲೆಮಾರುಗಳಿಗೆ ಸಾಕಾಗುವಷ್ಟು ಸಂಪತ್ತನ್ನು ಶೇಖರಿಸಿಡುವ ಹಪಾಹಪಿ ಉತ್ಕಟವಾಗಿ ಕಾಣುತ್ತಿದೆ. ಆದ್ದರಿಂದ 'ನಾವು ಎಷ್ಟು ನಾಗರಿಕರು?' ಎಂಬ ಪ್ರಶ್ನೆ ಅಸಂಗತವೆನ್ನಿಸುವುದಿಲ್ಲವೆ?

■ **ವೈನತೇಯ**

## ಮಾತೇ ಮುತ್ತು

★ ಮನುಷ್ಯ ಕೋಪವನ್ನು ಪ್ರೀತಿಯಿಂದ, ಪಾಪವನ್ನು ಸದಾಚಾರದಿಂದ, ಲೋಭವನ್ನು ದಾನದಿಂದ, ಮಿಥ್ಯೆಯ ಮಾತನ್ನು ಸತ್ಯದಿಂದ ಗೆಲ್ಲಬಲ್ಲ.

–ಗೌತಮ ಬುದ್ಧ

★ ಚಿಂತಿತ ಮನಸ್ಸಿನಿಂದ ನಿದ್ದೆ ಮಾಡುವ ಪ್ರಯತ್ನ ನಡೆಸುವುದು, ಹೃದಯದ ಮೇಲೆ ದೊಡ್ಡ ಭಾರವನ್ನು ಹೊತ್ತು ಮಲಗಿದಂತೆ.

–ಡಾ.ಎ.ಪಿ.ಜೆ.ಅಬ್ದುಲ್ ಕಲಾಂ

★ ನನಗೆ ಎಲ್ಲ ಸ್ವಾತಂತ್ರ್ಯ ಸಿಕ್ಕುವ ಮೊದಲು ಅಂತಃಕರಣಕ್ಕೆ ಅನುಸಾರವಾಗಿ ಯೋಚಿಸುವ, ಒಪ್ಪುವ ಹಾಗೂ ಮಾತನಾಡುವ ಸ್ವಾತಂತ್ರ್ಯ ಬೇಕು.

–ಮಿಲ್ಟನ್

★ ಜೀವನ ಮತ್ತು ಮೃತ್ಯು ಈ ಎರಡರಲ್ಲಿ ಯಾವುದು ಒಳ್ಳೆಯದು, ಇದನ್ನು ಕೇವಲ ದೇವರು ಮಾತ್ರ ಬಲ್ಲ.

–ಮೀರಾಬಾಯಿ

★ ಪ್ರಪಂಚದ ಯಾವ ಧರ್ಮವೂ ಹಿಂದೂ ಧರ್ಮದಷ್ಟು ಭವ್ಯವಾಣಿಯಲ್ಲಿ ಮನುಷ್ಯನ ಘನತೆಯನ್ನು ಬೋಧಿಸುವುದಿಲ್ಲ. ಪ್ರಪಂಚದ ಯಾವ ಧರ್ಮವೂ ದೀನದಲಿತರ ಕುತ್ತಿಗೆಯನ್ನು ಹಿಂದೂ ಧರ್ಮದಷ್ಟು ಕ್ರೂರವಾಗಿ ತುಳಿಯುವುದಿಲ್ಲ. ತಪ್ಪು ಹಿಂದೂ ಧರ್ಮದ್ದಲ್ಲ; ಅಲ್ಲಿರುವ ಸಂಪ್ರದಾಯವಾದಿಗಳದು, ಪುರೋಹಿತರದು.

–ಸ್ವಾಮಿ ವಿವೇಕಾನಂದ

★ ಹಣದ ಪ್ರಭಾವದಿಂದ ಇಡೀ ಜಗತ್ತು ಉಲ್ಟಾಪಲ್ಟಾ ಆಗುತ್ತದೆ.

–ಪ್ರೇಮ್‌ಚಂದ್

★ ಹೆಂಗಸರು ಗಂಡಸರಿಗಿಂತ ಹೆಚ್ಚು ಬುದ್ಧಿವಂತರು. ಏಕೆಂದರೆ ಅವರಿಗೆ ಗೊತ್ತಿರುವುದು ಕಮ್ಮಿ, ತಿಳಿವಳಿಕೆ ಅಧಿಕ.

–ಚದುರಂಗ

★ ಕಾಲೇಜು ತಿಳಿವು ಕೊಡುವುದಿಲ್ಲ, ತಿಳಿವು ಎಲ್ಲಿದೆ ಎಂಬುದನ್ನು ತಿಳಿಸುತ್ತದೆ.

–ಇ.ಸಿ.ಮೆಕಂಜಿ

★ ಅರ್ಥವಾಗುವುದಕ್ಕೆ ಮೊದಲೇ ನಮ್ಮೊಡನೆ ಮಾತಾಡುವುದೇ ಕಾವ್ಯ!

–ಟಿ.ಎಸ್.ಎಲಿಯಟ್

★ ಎಲ್ಲರ ಮಂಗಳವನ್ನು ಬಯಸುವುದೇ ನಿಜವಾದ ಧರ್ಮ.

–ರಾಮಾನುಜಾಚಾರ್ಯ

★ ಕಷ್ಟದ ನಂತರ ಕಷ್ಟ ಬರುವುದು ಸಹಜ, ಸಮೃದ್ಧಿಯ ನಂತರ ಸಮೃದ್ಧಿ.

–ಬಾಣನ ಕಾದಂಬರಿ

★ ವಿಪತ್ತಿನ ಸಮಯದಲ್ಲಿ ಬೇಕಾದೀತು ಎಂದು ಹಣವನ್ನು ಕೂಡಿಡಬೇಕು. ಹಣದಿಂದ ನಾರಿಯನ್ನು ಉಳಿಸಬೇಕು. ನಾರಿ ಮತ್ತು ಹಣದಿಂದ ನಿನ್ನನ್ನು ನೀನೇ ಬಚಾವು ಮಾಡಿಕೊಳ್ಳಬೇಕು.

–ವಿದುರ ನೀತಿ